ಆ) 2004ರವರೆಗೆ ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್ ಮತ್ತು ಇಂದಿರಾ ವಿಕಾಸ ಪತ್ರಗಳು ಎರಡು ಬಾರಿ ಇಮ್ಮಡಿಯಾಗಿದ್ದು ಇದರ ಮೊತ್ತ ಎಷ್ಟು; ಈ ಹಣವನ್ನು ರೈತ ಸದಸ್ಯರಿಗೆ ಕೂಡಲ ಹಂಚುವಂತೆ ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕಾರ್ಖಾನೆ ಜುಲೈ 2004ರವರೆಗೆ ಒಟ್ಟು ಕೊಡತಕ್ಕ ಸಾಲ ಹಾಗೂ ಬಡ್ಡಿ ವಿವರ ಈ ಕೆಳಕಂಡಂತೆ ಇರುತ್ತದೆ.

1. ಸಕ್ಕರೆ ದಾಸ್ತಾನಿನ ಮೇಲೆ ಸಕ್ಕರೆ ಅಡುವಿನ ಸಾಲರೂ. 78.00 ಕೋಟಿ
2. ಸ್ಕೋರ್ ಮೆಟೀರಿಯಲ್ ಮೇಲೆ ಅಡುವಿನ ಸಾಲರೂ. 00.28 ಕೋಟಿ
3. ಸ್ಪಿರಿಟ್ ದಾಸ್ತಾನಿನ ಮೇಲೆ ಅಡುವಿನ ಸಾಲರೂ. 1.46 ಕೋಟಿ
4. 2004–05ನೇ ಪೂರ್ವ ಹಂಗಾಮಿನ ಸಾಲ ರೂ. 00.96 ಕೋಟಿ
5. ಟ್ರಕ್, ಡಂಪರ್ ಹಾಗೂ 1 ಟ್ರಾಕ್ಟರ್ ಟ್ರಾಲಿ ವಾಹನಗಳ ಅಡುವಿನ ಸಾಲ ರೂ. 00.13 ಕೋಟಿ

2002–03ನೇ ಅರ್ಥಿಕ ವರ್ಷದಲ್ಲಿ ದೇಶಿ ಸಕ್ಕರೆ ಮಾರುಕಟ್ಟೆ ಕುಸಿದ ಕಾರಣ ದುಡಿಯುವ ಬಂಡವಾಳ ಸಾಲ ಖಾತೆಗೆ ಉಂಟಾದ ಶಾಟೀ ಮಾರ್ಜೀನ್‌ನ ಮಧ್ಯಮಾವಧಿ ಸಾಲಬಾಕಿರೂ. 22.76 ಕೋಟಿ

ಒಟ್ಟು ಬಾಕಿ 103.59 ಕೋಟಿ

ಆ) 2004ರವರೆಗೆ ಇಂದಿರಾ ವಿಕಾಸ್ ಪತ್ರ ಹಾಗೂ ಕಿಸಾನ್ ವಿಕಾಸ್ ಪತ್ರಗಳು ಒಮ್ಮೆ ಮಾತ್ರ ಇಮ್ಮಡಿಯಾಗಿದ್ದು ಒಟ್ಟು ಕೊಡತಕ್ಕ ಹಣ 1099 ಕೋಟಿ ರೂ. ಆಗಿರುತ್ತದೆ. ಕಾರ್ಖಾನೆಯ ಆರ್ಥಿಕ ಸ್ಥಿತಿ ಸುಧಾರಿಸಿದ ಮೇಲೆ ಹಂತ ಹಂತವಾಗಿ ಆದ್ಯತೆ ಮೇರೆಗೆ ಪಾವತಿ ಮಾಡಲಾಗುತ್ತದೆ. ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟಗಳನ್ನು ರೈತರಿಗೆ ಹಂಚಿದ್ದ ಪ್ರಯುಕ್ತ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

454(623) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಪ್ರವೇಶ ನೀಡಿಕೆಯಲ್ಲಿ ರೋಸ್ಟರ್ ಪದ್ಧತಿ ಅನುಸರಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೋಸ್ಟರ್ ಪದ್ಧತಿ ಅನುಸರಿಸದಿರುವ ಶಿಕ್ಷಣ ಸಂಸ್ಥೆಗಳು ಯಾವುವು ಹಾಗೂ ಅಂತಹ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು (ಶಿಕ್ಷಣ ಸಂಸ್ಥೆವಾರು ಮಾಹಿತಿ ನೀಡುವುದು);

ಈ) ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರುವಾಗ ವಿಧಿಸುವ ಷರತ್ತುಗಳೇನು;

ಊ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು;

ಋ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕಾರಣದಿಂದ ಅನುಮತಿ ನಿರಾಕರಿಸಲಾಗಿದೆ;

ಋ) ಹಾಗೂ ಭರ್ತಿ ಮಾಡಲು ಅನುಮತಿ ಯಾವಾಗ ಕೊಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನದ ಒಟ್ಟು ಮೊತ್ತ:

ಪ್ರಾಥಮಿಕ	–	149.08 ಕೋಟಿ
ಪ್ರೌಢ	–	375.49 ಕೋಟಿ
ಪದವಿ ಪೂರ್ವ	–	10,725.54 ಲಕ್ಷ
ತಾಂತ್ರಿಕ ಶಿಕ್ಷಣ	–	145.00 ಲಕ್ಷ
ಕಾಲೇಜು ಶಿಕ್ಷಣ	–	22,832.90 ಲಕ್ಷ

(ಶಿಕ್ಷಣ ಸಂಸ್ಥೆವಾರು ಮಾಹಿತಿ ಲಗತ್ತಿಸಿದೆ)

ಈ) 1) ಮೂಲಭೂತ ಸೌಲಭ್ಯಗಳಾದ ಕಟ್ಟಡ, ಆಟದ ಮೈದಾನ, ಪಾಠೋಪಕರಣ, ಪೀಠೋಪಕರಣ ಶೌಚಾಲಯ ಇತ್ಯಾದಿ ಸೌಲಭ್ಯಗಳನ್ನು ಹೊಂದಿರಬೇಕು.

2) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ನಿಗಧಿತ ವಿದ್ಯಾರ್ಥಿ ಸಂಖ್ಯೆಯನ್ನು ಶಿಕ್ಷಣ ಕಾಯ್ದೆ ನಿಯಮಾನುಸಾರ ಹೊಂದಿರಬೇಕು.

3) ಶಿಕ್ಷಣ ಕಾಯ್ದೆಯನ್ವಯ ನಿಗಧಿತ ವಿದ್ಯಾರ್ಹತೆ ಹೊಂದಿದ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರಬೇಕು ಮತ್ತು ಮೀಸಲಾತಿ ನಿಯಮವನ್ನು ಪಾಲಿಸಬೇಕು.

4) ಪ್ರತಿ ವರ್ಷ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು.

5) ಕಾಲ ಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಆದೇಶಗಳನ್ನು ಮತ್ತು ಸುತ್ತೋಲೆಗಳನ್ನು ಪಾಲಿಸಬೇಕು.

6) ಆಡಳಿತ ಮಂಡಳಿಯು ನೇಮಕಾತಿ ನಿಯಮಗಳನ್ನು ಹಾಗೂ ಶಿಕ್ಷಣ ಸಂಹಿತೆಯ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು ಹಾಗೂ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡು ಕಾಯ್ದುಕೊಳ್ಳತಕ್ಕದ್ದು.

7) ಆಡಳಿತ ಮಂಡಳಿಯು ಮಾಡಿರುವ ನೇಮಕಾತಿಗಳು ಈಗಾಗಲೇ ಸರ್ಕಾರವು ಅನುಮೋದಿಸಿರುವ ಅಂಗೀಕೃತ ಸಿಬ್ಬಂದಿ ನಮೂನೆಯಲ್ಲಿರತಕ್ಕದ್ದು.

8) ಆಡಳಿತ ಮಂಡಳಿಯು ಖಾಲಿ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಆ ಹುದ್ದೆಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ತುಂಬಬೇಕು. ಇದರ ಜೊತೆಗೆ ಮುಂದೆಯೂ ನಿಯಮಾನುಸಾರ ಎಸ್.ಸಿ : ಎಸ್.ಟಿ ಅಭ್ಯರ್ಥಿಗಳ ಜೊತೆಗೆ ಇತರೆ ಹಿಂದುಳಿದ ವರ್ಗಗಳ ನೇಮಕಾತಿ ಮಾಡಿಕೊಂಡು ಮೀಸಲಾತಿ ಅನುಪಾತ ಸರಿದೂಗಿಸಿಕೊಳ್ಳತಕ್ಕದ್ದು.

9) ಪ್ರತಿ ವರ್ಷವೂ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

10) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರುವಾಗ ಕರ್ನಾಟಕ ಶಿಕ್ಷಣ ಕಾಯ್ದೆ 1983ರಲ್ಲಿನ ಷರತ್ತುಗಳನ್ನು ಪೂರೈಸಿರಬೇಕು.

ಊ) ಖಾಲಿ ಇರುವ ಹುದ್ದೆಗಳ ವಿವರ:

ಪ್ರಾಥಮಿಕ	–	430
ಪ್ರೌಢ	–	2120
ತಾಂತ್ರಿಕ	–	547
ಕಾಲೇಜು ಶಿಕ್ಷಣ	–	2818
ಪದವಿ ಪೂರ್ವ	–	64

ಋ) ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 2144 ಹೆಚ್ಚುವರಿ ಶಿಕ್ಷಕರು ಇರುವ ಕಾರಣದಿಂದ ದಿನಾಂಕ 1–6–99 ರಿಂದ ಸಾಮಾನ್ಯ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ದಿನಾಂಕ 23–1–2002 ರಿಂದ ಅಲ್ಪಸಂಖ್ಯಾತ ಶಾಳೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸರ್ಕಾರವು ನಿಷೇಧಿಸಿದೆ.

ಪ್ರೌಢ ಶಿಕ್ಷಣ / ತಾಂತ್ರಿಕ / ಕಾಲೇಜು ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ: ಆಇ 2 ಬಿಇಎಂ 2003, ದಿನಾಂಕ 12–01–2004ರ ಪ್ರಕಾರ ಆರ್ಥಿಕ ಮಿತವ್ಯಯ ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನಿರಾಕರಿಸಲಾಗಿದೆ.

ಋ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 249ರ (ಇ)ಗೆ ಸಂಬಂಧಿಸಿದಂತೆ ಉತ್ತರ 73

(B) 025236

Department of Collegiate Education
Statement showing the Budget estimates of Private Aided Colleges for the year 2004-05 2202-03-104-1-01-101

Abstract

Sl. No.	Name of the Region	Budget estimates of Private Colleges coming under City jurisdiction	Budget estimates of Private Colleges coming under Rural jurisdiction	Total Budget estimates of Private Colleges both Urban & Rural
1.	Bangalore	3894.54	1489.45	5383.99
2.	Mysore	853.07	1297.09	2150.16
3.	Shimoga		1786.40	1786.40
4.	Mangalore	1155.68	2104.91	3260.59
5.	Gulbarga	526.06	1915.53	2441.59
6.	Dharwad	2435.45	5374.72	7810.17
	Total	**8864.80**	**13968.10**	**22832.90**

Accounts for the year 2002-03	Budget estimates for the year 2003-04	Budget estimates for the year 2004-05
23642.80	24217.00	22832.90

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮುಇ. ಕಾಸೂ. 111, 350 ಪುಸ್ತಕಗಳು, ದಿನಾಂಕ: 17-9-2005